# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 4/2024**

**ದೋ.ಸಾ. : 19 ಫ್ರಾ.ಸಾ. : 11**

| | | |
|---|---|---|
| ಸಾಕ್ಷಿಯ ಹೆಸರು | : | ನಾಗೇಶ ಲಮಾಣಿ |
| ತಂದೆಯ ಹೆಸರು | : | ಡಾಕಪ್ಪ ಲಮಾಣಿ |
| ವಯಸ್ಸು | : | 41 ವರ್ಷ |
| ಕೆಲಸ | : | ಜೂನಿಯರ್ ಇಂಜಿನಿಯರ್, ಹೆಸ್ಕಾಂ, ಗೇರುಸೊಪ್ಪ, |
| ವಾಸ | : | ಭಟ್ಕಳ. |

**ದಿನಾಂಕಃ 13-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಸೆಪ್ಟೆಂಬರ್ 2019 ರಿಂದ ಮಾರ್ಚ್ 2024 ರವರೆಗೆ ನಾನು ಭಟ್ಕಳ ಉಪವಿಭಾಗದ ಮುರ್ಡೇಶ್ವರ ಶಾಖೆಯ ಹೆಸ್ಕಾಂ ನಲ್ಲಿ ಶಾಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿ.19-10-2023 ರಂದು ಭಟ್ಕಳದ ಗ್ರಾಮಾಂತರ ಪೊಲೀಸರಿಂದ ಒಂದು ಕೋರಿಕೆ ಪತ್ರ ಬಂದಿದ್ದು, ಅದರಲ್ಲಿ ಮುರ್ಡೇಶ್ವರದ ತೆರ್ನಮಕ್ಕಿಯಲ್ಲಿ ಆರೋಪಿಯು ವಾಸವಾಗಿದ್ದ ಬಾಡಿಗೆ ಮನೆಯ ವ್ಯಾಪ್ತಿಯಲ್ಲಿ ದಿ.17-10-2023 ರಂದು ಸಂಜೆ 7.15 ಗಂಟೆಗೆ ವಿದ್ಯುತ್ ಸಂಪರ್ಕ ಚಾಲ್ತಿಯಲ್ಲಿ ಇತ್ತಾ ಅಥವಾ ಇಲ್ಲವಾ ಎಂಬ ಬಗ್ಗೆ ಮಾಹಿತಿ ನೀಡುವಂತೆ ಕೋರಿಕೊಂಡಿರುತ್ತಾರೆ. ಸದರಿ ಕೋರಿಕೆ ಪತ್ರ ಬಂದ ನಂತರ ನಾನು ನಮ್ಮ ಮುರ್ಡೇಶ್ವರದ 110 ಕೆ.ವಿ. ಉಪ ಕೇಂದ್ರದಲ್ಲಿ ನಿರ್ವಹಣೆ ಮಾಡುತ್ತಿದ್ದ ಲಾಗ್ ರಿಜಿಸ್ಟರ್ ನ್ನು ಪರಿಶೀಲಿಸಿ, ಅದರ ಅನುಸಾರ ದಿ.17-10-2023 ರಂದು ಸಂಜೆ 7.15 ಗಂಟೆಗೆ ಕೋರಿಕೆ ಪತ್ರದಲ್ಲಿ ತಿಳಿಸಿದ ಪ್ರದೇಶದಲ್ಲಿ ವಿದ್ಯುತ್ ಸಂಪರ್ಕ ಇರುತ್ತದೆ ಎಂದು ಮಾಹಿತಿಯನ್ನು ಪತ್ರ ಮುಖೇನ ನೀಡಿರುತ್ತೇನೆ. ಸಾಕ್ಷಿಯು ತನಗೆ ಬಂದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-32 ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ಮಾಹಿತಿಯ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-33 ಎಂದು, ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ  ಆರೋಪಿ ಪರ ಶ್ರೀಮತಿ ಎಸ್.ಜಿ.ಎನ್. ವಕೀಲರಿಂದಃ-**

2. ಪೊಲೀಸರ ಕೋರಿಕೆ ಮೇರೆಗೆ, ಸದರಿ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ